ಶ್ರೀ ಟಿ. ಚನ್ನಯ್ಯ.— ಸಾಮಾನ್ಯವಾಗಿ ಎರಡ್ಮೂ ಹಳ್ಳಿಗಳಿಗೂ plan ಗಳನ್ನು ಹಾಕಿಕೊಂಡು ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕಾಗಿದ್ದರೆ ಬಹಳ ಹಣ ಬೇಕಾಗುತ್ತದೆ. ಆದ್ದರಿಂದ ಎಲ್ಲಿ ಅವಶ್ಯಕತೆಯಿದೆ ಯೆಂದು ಸ್ಥಳೀಯ ಅಧಿಕಾರಿಗಳೇ ಶಿಫಾರಸ್ಸು ಮಾಡಿ ಕಳುಹಿಸುತ್ತಾರೋ, ಅಂತಹ ಹಳ್ಳಿಗಳ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆ.

Kandikere-Bellara Road.

Q.—570. **Sri C. H. LINGADEVARU** (Chiknaikanahalli).—

Will the Government be pleased to state :—

(*a*) (i) when the Kandikere-Bellara Road of Chiknaikanahalli taluk was sanctioned ;

(ii) the amount of the estimate ;

(*b*) the amount spent ;

(*c*) the period required for completing the work ?

A.—**Sri T. CHANNIAH** (Minister for Public Health and Local Self-Government).—

(*a*) (i) In 1942-43.

(ii) Rs. 1,120.

(*b*) Rs. 19,737.

(*c*) One working season, if the funds of the District Board permit.

ಶ್ರೀ ಸಿ. ಎಚ್. ಲಿಂಗದೇವರು.—ಈ ರಸ್ತೆಯಲ್ಲಿ ಎಷ್ಟು ಮೈಲಿಗಳ ಕೆಲಸವಾಗಿದೆ ?

ಶ್ರೀ ಟಿ. ಚನ್ನಯ್ಯ.—ನಾಲ್ಕು ಮೈಲಿಗಳು ಮಾತ್ರ ಆಗಿವೆಯೆಂದು ತಿಳಿದುಬಂದಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಕೆಲಸ ನಿಂತು ಎಷ್ಟು ದಿವಸಗಳಾದುವು ?

ಶ್ರೀ ಟಿ. ಚನ್ನಯ್ಯ.—1942-43ನೇ ಸಾಲಿನಲ್ಲಿ ಈ ಕೆಲಸ ಮಂಜೂರಾಯಿತು. ಅದು ಒಟ್ಟು 8½ ಮೈಲಿ ಉದ್ದವಿದೆ. ಮೊದಲು estimate ಮಾಡುವಾಗ 18,120 ರೂಪಾಯಿಗಳಿಗೆ ಮಂಜೂರಾಗಿತ್ತು. ಈಗ 4 ಮೈಲಿ ರಸ್ತೆ ಮಾಡಿದ್ದಕ್ಕೆ 19,703 ರೂಪಾಯಿಗಳು ಬೇಕಾಗಿದೆಯೆಂದು Public Works ಇಲಾಖೆಯವರು ತಿಳಿಸಿದ್ದಾರೆ ಮತ್ತು 8½ ಮೈಲಿ ರಸ್ತೆಯನ್ನು ಪೂರ್ತಿಯಾಗಿ ಮಾಡಬೇಕಾದರೆ 40 ಸಾವಿರ ರೂಪಾಯಿಗಳು ಬೇಕಾಗುತ್ತವೆ ಎಂಬುದಾಗಿ ತಿಳಿಸಿದಾರೆ. ಇದಕ್ಕೆ ಹಣಕಾಸನ್ನು ಯಾವ ರೀತಿ ಒದಗಿಸಬೇಕೆಂಬುದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಈಗ ಆಗಿರತಕ್ಕ 4 ಮೈಲಿ ರಸ್ತೆಯು ಗುರುತಾದರೂ ಇದೆಯೆ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಸಿ. ಎಸ್. ಲಿಂಗದೇವರು.—ಈ ಕೆಲಸ ಪೂರ್ತಿಯಾಗುವುದಕ್ಕೆ ಎಷ್ಟು ಮೈಲಿಗೆ ಅಂದಾಜಾಗಿದೆ ?

ಶ್ರೀ ಟಿ. ಚನ್ನಯ್ಯ.—ಒಟ್ಟು 8½ ಮೈಲಿಗಳಲ್ಲಿ 4 ಮೈಲಿ ರಸ್ತೆಯನ್ನು ಮಾಡಿದ್ದಾರೆ. ಆ 4 ಮೈಲಿ ರಸ್ತೆಗೆ 19 ಸಾವಿರ ಚಿಲ್ಲರೆ ರೂಪಾಯಿಗಳ estimate ಮಾಡಿದ್ದಾರೆ.

ಶ್ರೀ ಸಿ. ಎಚ್. ಲಿಂಗದೇವರು.—ಈ ಕೆಲಸವನ್ನು ಮುಂದುವರಿಸದೆ ನಿಲ್ಲಿಸುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಇನ್ನೂ 40 ಸಾವಿರ ರೂಪಾಯಿ ಹಣವಿದ್ದರೆ ಉಳಿದ ರಸ್ತೆಯನ್ನು ಪೂರೈಸುವುದಕ್ಕೆ ಸಾಧ್ಯವಾಗುತ್ತದೆ. ಹಣದ ಅಭಾವದಿಂದ ಕೆಲಸ ಮುಂದುವರಿಸದೆ ಹಾಗೆಯೇ ಇದೆ.

ಶ್ರೀ ಸಿ. ಎಚ್. ಲಿಂಗದೇವರು.—District Boardನಲ್ಲಿ ಹಣದ ಅಭಾವವಿದ್ದು ಕೆಲಸ ನಿಂತಿದ್ದರೆ State fundನಿಂದ ಈ ರಸ್ತೆಯ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಈ ರಸ್ತೆ District Boardಗೆ ಸೇರಿದೆ. District Fundನಿಂದಲೇ ಈ ರಸ್ತೆಯ ಕೆಲಸವನ್ನು ಮಾಡಬೇಕಾಗಿದೆ. ಇದನ್ನು State Fund road ಆಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಸಿ. ಎಚ್. ಲಿಂಗದೇವರು.—District Boardನಲ್ಲಿ ಸಾಕಷ್ಟು ಹಣವಿಲ್ಲದೆ ಈ ಕೆಲಸ ನಿಂತು ಹೋಗಿ 10-12 ವರ್ಷಗಳಾಗಿವೆ. ಅದು ಮುಖ್ಯವಾದ ರಸ್ತೆಯಾಗಿರುವುದರಿಂದ State Fund ರೋಡಿನೊಳಗೆ ಇದನ್ನು ಸೇರಿಸಲು ಪ್ರಯತ್ನಪಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—1951ನೇ ಇಸವಿಯಲ್ಲಿ ರೋಡು re-classification ಮಾಡಿದಾಗ ಈ ರಸ್ತೆ District Board ಗೆ ಸೇರಬೇಕೆಯೆಂದು ತೀರ್ಮಾನವಾಗಿದೆ. ಈಗ ಅದನ್ನು State Fund Roadಗೆ ಸೇರಿಸಬೇಕಾದರೆ ಅದನ್ನು ಯೋಚನೆ ಮಾಡಬೇಕು. ಹಿಂದೆ ತೀರ್ಮಾನವಾದುದನ್ನು ಮತ್ತೆ ಬದಲಾಯಿಸುವುದಕ್ಕೆ ಕಷ್ಟವಾಗತ್ತದೆ ಅವಶ್ಯಕತೆ ಇದೆಯೇ ಎಂಬುದನ್ನು ಯೋಚನೆ ಮಾಡಬೇಕು.

ಶ್ರೀ ಸಿ ಎಚ್. ಲಿಂಗದೇವರು.—ಇದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಬರೆದು ತಿಳಿದುಕೊಳ್ಳುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—18,000 ರೂಪಾಯಿಗಳಿಗೆ ಅಂದಾಜಾಗಿದೆಯೆಂದು ಹೇಳಿದ್ದೀರಿ ; ಈಗ 19,032 ರೂಪಾಯಿಗಳು ಖರ್ಚಾಗಿಯೂ complete ಆಗದಿರುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಡಿಸ್ಟ್ರಿಕ್ಟ್ ಬೋರ್ಡಿನವರು 40,000 ರೂಪಾಯಿಗಳನ್ನು ಒದಗಿಸಿದರೆ 8½ ಮೈಲಿ ರಸ್ತೆಯನ್ನು ಪೂರೈಸಬಹುದು. ಮಿಡ್ಲ್‌ಲ್ಲಿದಿರುವುದರಿಂದ ಇದನ್ನು ಪೂರೈಸುವುದಕ್ಕಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಸಹಾಯದ್ರವ್ಯವೇನಾದರೂ ಕೊಟ್ಟು ಸಹಾಯ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—40,000 ರೂಪಾಯಿಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ಕೆಲಸ ನಿಂತುಹೋಗಿದೆ. ಆದ್ದರಿಂದ ಮುಂದಕ್ಕೆ ಸ್ವಲ್ಪ ಸ್ವಲ್ಪ ತೆಗೆದುಕೊಂಡು ಮಾಡುವುದಕ್ಕೆ ಪ್ರಯತ್ನಮಾಡೋಣ.

Hosa Palya-Tiptur Road.

Q.—766. **Sri T. G. THIMMEGOWDA** (Tiptur).—

Will the Government be pleased to state :—

(*a*) whether it is a fact that a road connecting Hosa Palya and Tiptur has

been planned, estimated and partly laid out nearly ten years ago ;

(*b*) whether it is a fact that the Village Panchayets of Hosa Palya and Hale Palya have deposited their share of the estimated contribution six years ago ;

(*c*) whether there have not been repeated representations to complete the road early ;

(*d*) whether they would cause the completion of the work expeditiously ?

A.—**Sri T. CHANNIAH** (Minister for Public Health and Local Self-Government).—

(*a*) Yes.

(*b*) Yes.

(*c*) Yes.

(*d*) The District Board, Tumkur which has to find Rs. 17,000 for completing this work, proposes to take it up as soon as it can find funds for it.

ಶ್ರೀ ಟಿ. ಜಿ. ತಿಮ್ಮೇಗೌಡ.—ಹೊಸಪಾಳ್ಯ-ಹಳೇ ಪಾಳ್ಯ ರಸ್ತೆಗೆ ಡಿಪಾಜಿಟ್ ಮಾಡಿರುವ ಮೊಬಲಗೆಷ್ಟು ?

ಶ್ರೀ ಟಿ. ಚನ್ನಯ್ಯ.—3,000 ರೂಪಾಯಿಗಳು.

ಶ್ರೀ ಟಿ. ಜಿ. ತಿಮ್ಮೇಗೌಡ.—ಎಷ್ಟು ವರ್ಷವಾಯಿತು ಡಿಪಾಜಿಟ್ ಮಾಡಿ ?

ಶ್ರೀ ಟಿ. ಚನ್ನಯ್ಯ.—1944ನೆಯ ಇಸವಿಯಲ್ಲಿ ಡಿಪಾಜಿಟ್ ಮಾಡಿದರು.

ಶ್ರೀ ಟಿ. ಜಿ. ತಿಮ್ಮೇಗೌಡ.—ಈ ಮೊಬಲಗನ್ನು ಡಿಪಾಜಿಟ್ ಮಾಡಿದ್ದು ಡಿಸ್ಟ್ರಿಕ್ಟ್ ಬೋರ್ಡಿನವರು ಈ ರಸ್ತೆಯ ಕೆಲಸವನ್ನು ಪ್ರಾರಂಭಿಸುವ ಉದ್ದೇಶದಿಂದ ತಾನೆ ?

ಶ್ರೀ ಟಿ. ಚನ್ನಯ್ಯ.—ಅವರೂ ಸಹ 3,000 ರೂಪಾಯಿಗಳನ್ನು ಒದಗಿಸಿದ್ದಾರೆ. ಒಟ್ಟು 11, 00 ರೂಪಾಯಿಗಳಾಗಬೇಕೆಂದು ಅಂದಾಜಾಗಿದೆ. ಈಗ P.W.D.ಯವರು ತೆಗೆದುಕೊಂಡು ಮಾಡಬೇಕೇ ಅಥವಾ ಡಿಸ್ಟ್ರಿಕ್ಟ್ ಬೋರ್ಡಿನವರು ಮಾಡಬೇಕೇ, ಯಾರು ಜವಾಬ್ದಾರರು ಎಂಬುದು ತೀರ್ಮಾನವಾಗಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿನವರಿಗೆ P W. D.ಯ funds ನ್ನು transfer ಮಾಡಿ ಅವರ ಮುಖಾಂತರ ನಡೆಸಬೇಕು ಎಂಬ ರೀತಿಯಲ್ಲಿ ಪತ್ರವ್ಯವಹಾರ ನಡೆಯುತ್ತಿದೆ.

ಶ್ರೀ ಟಿ. ಜಿ. ತಿಮ್ಮೇಗೌಡ.—P. W. D.ಯವರೇ ತೆಗೆದುಕೊಂಡು ಕೆಲಸ ಮಾಡಿಸುವಂತೆ ಭರವಸೆ ಕೊಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಡಿಸ್ಟ್ರಿಕ್ಟ್ ಬೋರ್ಡಿನವರೇ ಮಾಡಲೆಂದು ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಡಿಸ್ಟ್ರಿಕ್ಟ್ ಬೋರ್ಡಿನವರು ಇಷ್ಟು ವರ್ಷಗಳಾದರೂ ಮಾಡಿಲ್ಲ. ತಾವಾದರೂ ಮಾಡಿಸಿದರೆ ಒಳ್ಳೆಯದು.

ಶ್ರೀ ಟಿ. ಚನ್ನಯ್ಯ.—ಈಗ ಡಿಸ್ಟ್ರಿಕ್ಟ್ ಬೋರ್ಡಿನವರಿಗೇ ವರ್ಗಾಯಿಸಿ ಮಾಡಿಸಬೇಕೆಂದು ಮಾಡಿದೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಡಿಸ್ಟ್ರಿಕ್ಟ್ ಬೋರ್ಡಿನವರು ಎಷ್ಟು ಮೈಲಿ ಕೆಲಸ ಮಾಡಿದ್ದಾರೆ ?

ಶ್ರೀ ಟಿ. ಚನ್ನಯ್ಯ.—ಏನೂ ಕೆಲಸ ಮಾಡಿಲ್ಲ. 728 ರೂಪಾಯಿಗಳನ್ನು ಮಾತ್ರ P. W. D.ಯವರು ಖರ್ಚುಮಾಡಿದ್ದಾರೆ, ಅಷ್ಟೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಈ ರಸ್ತೆಯ ಅವಶ್ಯಕತೆ ಬಹಳವಾಗಿರುವುದರಿಂದ ಕೂಡಲೇ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ತಾವು ಹೇಳಿದಿರಿ, ಡಿಪಾಜಿಟ್‌ಮಾಡಿ 11 ವರ್ಷಗಳಾದವು ಎಂದು. ಡಿಸ್ಟ್ರಿಕ್ಟ್ ಬೋರ್ಡಿನವರು 3,000 ರೂಪಾಯಿಗಳನ್ನು ಕೊಟ್ಟೂ, ಪಂಚಾಯಿತಿಯವರು 3,000 ರೂಪಾಯಿಗಳನ್ನು ಕೊಟ್ಟೂ 12 ವರ್ಷದಿಂದ ತಾವು ಸುಮ್ಮನಿರುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—P. W. D. ಯವರ ಕೆಲಸ ವಲ್ಲವೆಂದು ನಿಂತುಹೋಗಿದೆ. ಈಗ ಹಣವನ್ನು transfer ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—12 ವರ್ಷದಿಂದ transfer ಮಾಡದೆ ಕುಳಿತಿದ್ದೀರಾ ?

ಶ್ರೀ ಟಿ ಚನ್ನಯ್ಯ.—ತಾವೇ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾಗಿದ್ದಿರಿ. ತಾವೇ ಇದನ್ನೆಲ್ಲಾ ಮಾಡಿಸಬಹುದಾಗಿತ್ತು.

ಶ್ರೀ ಬಿ. ಹುಚ್ಚೇಗೌಡ.—ನಾವೇ 3,000 ರೂಪಾಯಿಗಳನ್ನು ಕೊಟ್ಟಿದ್ದು. ಆದರೂ ನಮಗೆ ರಸ್ತೆ ಕೊಡದೆ ತಾವೇ ಮಾಡುತ್ತೇವೆಂದು ಕೈಕೊಂಡಮೇಲೆ ಏಕೆ ಮಾಡಿಲ್ಲ ?

ಶ್ರೀ ಟಿ. ಚನ್ನಯ್ಯ.—ದುಡ್ಡಿದೆ. ಆದರೆ ನಮ್ಮ P. W. D. ಇಲಾಖೆಯಲ್ಲ ಬೇಕಾದಷ್ಟು ಕೆಲಸವಿದ್ದು ಇದನ್ನು ಮಾಡುವುದಕ್ಕಾಗಿಲ್ಲ. ಎಲ್ಲಾ Departmental ಕೆಲಸಗಳನ್ನೂ P. W. D. ಇಲಾಖೆಯವರೇ ಮಾಡಬೇಕು. ಅವರ ಜವಾಬ್ದಾರಿ ದೊಡ್ಡದು.

Sri A. BHEEMAPPA NAIK.—Are they not meant for this kind of work ? If they are not capable of doing, why should they not give up the responsibility ?

Sri Kadidal MANJAPPA.—I do not know the details. I will enquire into the matter. If the funds are available, if they are deposited, I will see the work is taken up early.

Sri B. HUTCHEGOWDA.—It is not the question of availability of the funds. Sir, the amount has been paid to the P.W. Department and the Government grant was also there.

Sri A. V. NARASIMHA REDDY.—I rise to a point of order, Sir. My friend Sri Hutchegowda has yielded to Sri Bheemappa Naik to put supplementaries, by which Sri Hutchegowda has forfeited his right of putting further supplementaries.

Mr. SPEAKER.—Sri Bheemappa Naik is not putting supplementaries, but has explained the position.